







1. ಜ್ಯೋತ್ಸ್ನಾ ಅವರ 'ಈವೆನ್ ದಿ ಡಾರ್ಕೆಸ್ಟ್ ನೈಟ್ ವಿಲ್ ಎಂಡ್'
2. ಮಾಧವಿ ಶ್ರೀವಾಸ್ತವ ರಚಿತ 'ಮಿ ಅಂಡ್ ಮೈ ಸರೌಂಡಿಂಗ್ಸ್'
3. ಸುಸಾಂತಾ ಪಾಲ್ ಕಣ್ಣಲ್ಲಿ 'ಪ್ರೊಸೆಷನ್'
4. ವಿನಯ್ ಗುಸೇನ್ ರಚಿಸಿದ 'ಔಟ್ ಆಫ್ ಬ್ರೀತ್'

ಕೋಲ್ಕತ್ತಾ ಸೆಂಟರ್ ಫಾರ್ ಕ್ರಿಯೇಟಿವಿಟಿಯಲ್ಲಿ ಕಲಾ ಪ್ರದರ್ಶನಗಳನ್ನು ಆಯೋಜಿಸಿದರು. ಇದೀಗ ಏಳನೇ ಪ್ರದರ್ಶನವನ್ನು ಬೆಂಗಳೂರಿನ ಚಿತ್ರಕಲಾಪರಿಷತ್ತಿನಲ್ಲಿ ಹಮ್ಮಿಕೊಳ್ಳಲಾಗಿದೆ. ಜನವರಿ 22ರಿಂದ ಆರಂಭವಾದ ಈ ಪ್ರದರ್ಶನ ಫೆಬ್ರುವರಿ 4ರವರೆಗೂ ಮುಂದುವರೆಯಲಿದೆ.

ಕೆಲವು ಕಲಾಕೃತಿಗಳು, ಆಯ್ದುಕೊಂಡ ವಿಷಯಗಳಿಂದ ವಿಶೇಷವೆನಿಸಿದರೆ, ಮತ್ತಷ್ಟು ಕಲಾಕೃತಿಗಳು ಅನುಭವಗಳನ್ನು ಚಿತ್ರಿಸಿದ ರೀತಿಯಿಂದ ಗಮನ ಸೆಳೆಯುತ್ತವೆ. ಮೇಣದಂತೆ ಕರಗಿಹೋಗುತ್ತಿರುವ ಕಾಲದೊಂದಿಗೆ ಜಗಳಕ್ಕಿಳಿಯುವ ಮನುಷ್ಯ ಅದೆಷ್ಟು ಹೈರಾಣಾಗಿದ್ದಾನೆ ಎಂಬುದನ್ನು ಒಂದಷ್ಟು ಚಿತ್ರಗಳು ತೋರಿದರೆ, ಪ್ರೀತಿಪಾತ್ರರನ್ನು ಕಳೆದುಕೊಂಡು, ಎದೆಯೊಳಗೆ ಸಾವನ್ನಿಟ್ಟುಕೊಂಡೇ ಬದುಕುತ್ತಿರುವ ಜನರ ಚಿತ್ರಣವನ್ನು ಮತ್ತೊಂದಷ್ಟು ಕಲಾಕೃತಿಗಳು ತೆರೆದಿಟ್ಟಿವೆ.

ಕೊರೊನಾದ ಆರಂಭಿಕ ದಿನಗಳನ್ನು 'ಆನ್‌ಸ್ಲಾಟ್' ಬಿಡಿಸಿಟ್ಟಿದೆ. ಲಾಕ್‌ಡೌನ್‌ನಿಂದಾಗಿ ಒಂಟಿತನಕ್ಕೆ ಬಿದ್ದ ಮನುಷ್ಯನ ಚಿತ್ರಣವನ್ನು 'ಲಾಕ್ಡ್ ಅಂಡ್ ಡೌನ್' ತೆರೆದಿಡುತ್ತದೆ. ಸಾವಿಗೆ ಹೆದರಿದ, ತಮ್ಮವರ ಸಾವಿಗೆ ಮರುಗಿದ, ಸಾವಿನ ಸೂತ್ರಕ್ಕೆ ಸಿಲುಕಿ ನಲುಗಿದ ಜನರ ಚಿತ್ರವನ್ನು 'ಡೆತ್ ಅಂಡ್ ಸಕ್ಕರ್' ಕಾಣಿಸುತ್ತದೆ. ಎರಡನೇ ಅಲೆ ತುತ್ತತುದಿಗೇರಿ ಸಾವಿರಾರು ಮಂದಿ ಬೀದಿಗಳಲ್ಲಿ, ಆಸ್ಪತ್ರೆಯ ಆವರಣದಲ್ಲೇ ಸಾಮೂಹಿಕವಾಗಿ ಸಾವಿನ ಮನೆಗೆ ಹೊರಟ ಚಿತ್ರಣ ಕಣ್ಣು ಕಟ್ಟುತ್ತದೆ. ಬದುಕುವುದೊಂದೇ ಧ್ಯೇಯವಾಗಿ ವಲಸೆ ಹೊರಟವರ ದುಸ್ಥಿತಿಯನ್ನು 'ದಿ ಎಕ್ಸೊಡಸ್' ವಿವರಿಸುತ್ತದೆ. ಕ್ವಾರಂಟೈನ್ ಚಿತ್ರಣ 'ದಿ ಡೊಮೆಸ್ಟಿಕ್ ಸ್ಪೇಸ್'ನದ್ದು. ಹತಾಶೆ, ಅಸಹಾಯಕತೆ, ನೋವು ದುಮ್ಮಾನಗಳನ್ನು ತುಂಬಿಕೊಂಡೇ ಬದುಕುವ ಮಂದಿಯ ಮುಖವನ್ನು 'ಆಂಗ್ವಿಷ್ ಆಂಡ್ ಆಂಕ್ಸೈಟಿ' ಪರಿಚಯಿಸಿದೆ. ಇವೆಲ್ಲದರಿಂದ ಹೊರಬಂದು ಚೇತರಿಕೆ ಪಡೆದ ಹಾದಿಯನ್ನು 'ದಿ ಹೀಲರ್' ತೆರೆದಿಡುತ್ತಲೇ ಮರೆಯಲಾಗದ ಗಾಯದ ನೆನಪನ್ನು ಕೆದಕುತ್ತದೆ.

'1943ರ ಬಂಗಾಳ ಕ್ಷಾಮದ ನಂತರ ಭಾರತ ಇಂಥ ವೇದನೆಯನ್ನು ಕಂಡಿರಲಿಲ್ಲ. ಇತಿಹಾಸದಲ್ಲಿ ಎಂದಿಗೂ ಮರೆಯಲಾರದ ಈ ಕೊರೊನಾ ಕಾಲಘಟ್ಟದ ದೃಶ್ಯ ಸಂಗ್ರಹ ಈ ಪ್ರದರ್ಶನವಾಗಿದೆ. ಕತ್ತಲೆಯಿಂದ ಬೆಳಕಿನೆಡೆಗೆ ನಡೆದ ಹಾದಿಯ ವಿಸ್ತೃತ ನೋಟವೂ ಇದಾಗಿದೆ' ಎನ್ನುತ್ತಾರೆ ಪೌಲಾ. ಈ ಪ್ರದರ್ಶನ, 'ಕಲೆ ಕಾಲದ ಕನ್ನಡಿ' ಎನ್ನುವ ಮಾತಿಗೆ ಅಡಿಗೆರೆ ಎಳೆಯುವಂತಹದ್ದು.

ಪ್ರತಿಕ್ರಿಯಿಸಿ: feedback@sudha.co.in